<u>**ಕರ್ನಾಟಕ ಸರ್ಕಾರ**</u>

ಆರ್ಥಿಕ ಇಲಾಖೆ

ಸಂಖ್ಯೆ :ಆಇ 04 ಬಿಪಿಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ:257, ವಿಧಾನಸೌಧ,
ಬೆಂಗಳೂರು, ದಿ:27–09–2019

**ಸುತ್ತೋಲೆ**

ವಿಷಯ :- 2020–21ನೇ ಸಾಲಿನ ಆಯವ್ಯಯ ರಾಜಸ್ವ ಜಮೆ ತಯಾರಿಕೆಯ ಬಗ್ಗೆ.

* * *

2020-21ನೇ ಸಾಲಿನ ರಾಜಸ್ವ ಜಮೆ ತಯಾರಿಸಲು ಸೂಚನೆಗಳನ್ನು ಈ ಕೆಳಕಂಡಂತೆ ನೀಡಲಾಗಿದೆ:–

ಎ. <u>**ಜಮೆ ಅಂದಾಜುಗಳು**</u>:

1. <u>**ತೆರಿಗೆ ರಾಜಸ್ವ**</u>:

ಅ) ರಾಜ್ಯ ತೆರಿಗೆ ಸ್ವೀಕೃತಿಗಳ ಅಂದಾಜುಗಳು ರಾಜ್ಯ ಸರ್ಕಾರದ ಸಂಬಂಧಿಸಿದ ಅಧಿನಿಯಮಗಳ ಅಡಿಯಲ್ಲಿ ವಿಧಿಸಲಾಗುವ ತೆರಿಗೆ ದರ, ಸುಂಕ ಮತ್ತು ಶುಲ್ಕದ ಪ್ರಸಕ್ತ ದರದ ಆಧಾರದ ಮೇಲೆ ಇರತಕ್ಕದ್ದು. ಈ ಮುನ್ನ ರೂಪಿಸಿದ ಅಂದಾಜುಗಳ ಮೇಲೆ ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳನ್ನು ತಯಾರಿಸುವಾಗ ಅಂದಾಜು ತಯಾರಿಸುವ ಅಧಿಕಾರಿಗಳು, ನಿಗದಿಪಡಿಸಿದ ಗುರಿ, ವಾಸ್ತವಿಕ ಪ್ರಗತಿ, ಆಯವ್ಯಯ ಅಂದಾಜುಗಳನ್ನು ಅಂತಿಮಗೊಳಿಸಿ ಮಂಡಿಸಿದ ತರುವಾಯ ವಿಧಾನ ಮಂಡಲವು ಜಾರಿಗೆ ತಂದ ಕಾನೂನುಗಳಿಂದಾಗಿ ಈಗಿನ ತೆರಿಗೆಗಳನ್ನು ಹೆಚ್ಚಿಸಿದ್ದರ ಪರಿಣಾಮವಾಗಿ ನಿರೀಕ್ಷಿಸಿದ ಹೆಚ್ಚುವರಿ ಆದಾಯ, ತೆರಿಗೆಗಳನ್ನು ರದ್ದುಪಡಿಸಿದ ಅಥವಾ ಇಳಿಸಿದ್ದರ ಪರಿಣಾಮವಾಗಿ ರಾಜಸ್ವ ನಷ್ಟದ ಅಂದಾಜು ಮುಂತಾದ ಮುಖ್ಯ ಅಂಶಗಳನ್ನು ಗಮನದಲ್ಲಿಡತಕ್ಕದ್ದು.

ಆ) ಹಾಗೆಯೇ ಮುಂದಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳು ಕೇವಲ ಪ್ರಸಕ್ತ ವರ್ಷಕ್ಕೆ ತಯಾರಿಸಿದ ಪರಿಷ್ಕೃತ ಅಂದಾಜುಗಳ ಪುನರಾವರ್ತನೆಯಾಗಬಾರದು. ಆದರೆ, ವಸೂಲಾಗಬೇಕಾದ ಬಾಕಿ ತೆರಿಗೆ, ಮುಂದಿನ ವರ್ಷದ ಬೇಡಿಕೆ, ತೆರಿಗೆ ರಾಜಸ್ವಕ್ಕೆ ಸಂಬಂಧಿಸಿದಂತೆ ಸಾಧಾರಣವಾಗಿ ಹೆಚ್ಚಾಗಬಹುದಾದ ಬೆಳವಣಿಗೆ ಪ್ರಮಾಣದ ಗ್ರಹಿಕೆ ಮತ್ತು ಹಿಂದಿನ ವರ್ಷಗಳ ಕಾರ್ಯ ಸಾಧನೆ, ಪ್ರಸಕ್ತ ವರ್ಷದ ವಾಸ್ತವಿಕಗಳ ಪ್ರಗತಿ/ ಪ್ರವೃತ್ತಿ ಮತ್ತು ಹಿಂದಿನ ಕಂಡಿಕೆಯಲ್ಲಿ ಉಲ್ಲೇಖಿಸಲಾದ ತೆರಿಗೆ ವ್ಯವಸ್ಥೆಗೆ ಸಂಬಂಧಿಸಿದ ಹೊಸ ಕ್ರಮಗಳಿಂದಾದ ಪರಿಣಾಮ ಮುಂತಾದ ಸೂಕ್ತ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಇ) ಬೇಡಿಕೆ, ವಸೂಲಾತಿ ಮತ್ತು ಶಿಲ್ಕು ವಿವರಣಾ ಪಟ್ಟಿಯನ್ನು ತೆರಿಗೆ ರಾಜಸ್ವ ಅಂದಾಜುಗಳ ಜೊತೆಯಲ್ಲಿ ಕಳುಹಿಸಬೇಕು. ವರ್ಷಾವಾರು ಬಾಕಿಯನ್ನು ಲಗತ್ತಿಸಿರುವ ಅನುಬಂಧ–1ರಂತೆ ಪ್ರತ್ಯೇಕವಾಗಿ ತೋರಿಸಬೇಕು.

ಈ) ಹೊಸ ತೆರಿಗೆಗಳನ್ನು ಪ್ರಸ್ತಾಪಿಸುವ ಮೂಲಕವಾಗಲೀ ಅಥವಾ ಆಸ್ತಿತ್ವದಲ್ಲಿರುವ ತೆರಿಗೆ ಸ್ವರೂಪಗಳ ಪರಿಷ್ಕರಣೆಯಿಂದಾಗಲೀ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಇಲಾಖಾ ಮುಖ್ಯಸ್ಥರುಗಳು ಸರ್ಕಾರಕ್ಕೆ ತಿಳಿಸಬೇಕು.

2) **ತೆರಿಗೆಯೇತರ ರಾಜಸ್ವ:**

(ಅ) ರಾಜಸ್ವ ಸ್ವೀಕೃತಿಯಲ್ಲಿ ತೆರಿಗೆಯೇತರ ರಾಜಸ್ವದ ಪಾಲು ಹಿಂದಿನ ಹಲವಾರು ವರ್ಷಗಳಿಂದಲೂ ಇಳಿಮುಖಗೊಂಡಿದೆ. ಪ್ರಮುಖವಾಗಿ ವೆಚ್ಚ ವಸೂಲಾತಿ ದರದಲ್ಲಿನ ಇಳಿಕೆ ಮತ್ತು ಕ್ಷೀಣತೆ ಸಾರ್ವಜನಿಕ ಉದ್ದಿಮೆಗಳ ಕಳಪೆ ಕಾರ್ಯನಿರ್ವಹಣೆ ಹಾಗೂ ಲಾಭಕರವಲ್ಲದ, ದುಬಾರೀ ಸಹಾಯಧನಗಳಿಂದಾಗಿ ಜಿಎಸ್‌ಡಿಪಿಗೆ ಹೋಲಿಸಿದಲ್ಲಿ ತೆರಿಗೆಯೇತರ ರಾಜಸ್ವದ ಪ್ರಮಾಣವು ನಗಣ್ಯವಾಗಿದೆ.

(ಆ) ಆಡಳಿತ ಇಲಾಖೆಗಳಿಂದ ಕಾಲಕಾಲಕ್ಕೆ ಕ್ರಮಬದ್ದವಾಗಿ ನಡೆಸಬೇಕಾಗಿದ್ದ ಮೇಲ್ವಿಚಾರಣೆಯ ಕೊರತೆ ಮತ್ತು ಬಳಕೆ ಶುಲ್ಕಗಳನ್ನು ಪರಿಷ್ಕರಿಸದಿರುವುದು ತೆರಿಗೆಯೇತರ ರಾಜಸ್ವವು ನಿಶ್ಚಲಗೊಳ್ಳಲು ಮುಖ್ಯ ಕಾರಣಗಳಲ್ಲೊಂದಾಗಿದೆ. ಬಳಕೆ ಶುಲ್ಕಗಳ ಪರಿಷ್ಕರಣೆಯು ಹೂಡುವಳಿ ವೆಚ್ಚಕ್ಕೆ ಸೂಚ್ಯ ಸಂಪರ್ಕ (Indexed Linked) ಹೊಂದಿರಬೇಕು ಮತ್ತು ಕಾಲ ಕಾಲಕ್ಕೆ ಪರಿಷ್ಕರಿಸುವ ಕಾರ್ಯವಿಧಾನವು ಸ್ವಯಂಚಾಲಿತವಾಗಿರಬೇಕೆಂದು ಹಣಕಾಸು ಆಯೋಗಗಳು ಶಿಫಾರಸ್ಸು ಮಾಡಿರುತ್ತವೆ. ರಾಜ್ಯ ಹಣಕಾಸಿನ ವ್ಯವಹಾರಗಳ ಮೇಲಿನ ವರದಿಯಲ್ಲಿ ತೆರಿಗೆಯೇತರ ರಾಜಸ್ವದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಮಹಾಲೇಖಪಾಲರು ರಾಜಸ್ವ ಸಂಗ್ರಹವನ್ನು ಹೆಚ್ಚಿಸಲು ನಿಯಮಿತವಾಗಿ ಬಳಕೆದಾರರ ಶುಲ್ಕಗಳನ್ನು ಪರಿಷ್ಕರಣೆ ಮಾಡಬಹುದೆಂದು ಅಭಿಪ್ರಾಯಿಸಿರುತ್ತಾರೆ.

(ಇ) ಆದ್ದರಿಂದ, ತೆರಿಗೆಯೇತರ ರಾಜಸ್ವದಡಿ ಪ್ರಸ್ತುತ ಸಂಗ್ರಹಣಾ ಮಟ್ಟಕ್ಕಿಂತ ತೆರಿಗೆಯೇತರ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ನಿಶ್ಚಿತ ಪ್ರಯತ್ನಗಳನ್ನು ಮಾಡತಕ್ಕದ್ದು. ಎಲ್ಲಾ ಇಲಾಖೆಗಳು ತೆರಿಗೆಯೇತರ ರಾಜಸ್ವ ಅಂದಾಜುಗಳನ್ನು ಸಲ್ಲಿಸುವ ಮುನ್ನ ಎಲ್ಲಾ ತೆರಿಗೆಯೇತರ ರಾಜಸ್ವ ಮೂಲಗಳನ್ನು ಪರಿಶೀಲಿಸಿ ತೆರಿಗೆಯೇತರ ರಾಜಸ್ವ ದರಗಳನ್ನು/ ಬಳಕೆ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

(ಈ) ವಿವಿಧ ಇಲಾಖೆಗಳಲ್ಲಿ ತೆರಿಗೆಯೇತರ ಆದಾಯ ದರಗಳನ್ನು (Non-tax revenue) ಪರಿಷ್ಕರಿಸುವ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಪ್ರಸ್ತುತ ಇರುವ ತೆರಿಗೆಯೇತರ ಸ್ವೀಕೃತಿಗಳನ್ನು ಪುನರ್ ಪರಿಶೀಲಿಸಿ ದರಗಳನ್ನು ಪರಿಷ್ಕರಿಸುವ ಹಾಗೂ ನಿಯಮಿತವಾಗಿ ದರಗಳ ಪರಿಷ್ಕರಣೆ ನಡೆಯುವಂತೆ ವ್ಯವಸ್ಥಿತ ಕ್ರಮ ರೂಪಿಸಲು ಸಭೆಗಳನ್ನು ನಡೆಸಲಾಗಿದೆ. ಆದ್ದರಿಂದ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ಇಲಾಖೆಗೆ ಸಂಬಂಧಿಸಿದಂತೆ ತೆರಿಗೆಯೇತರ ಆದಾಯದ ದರಗಳನ್ನು ಸರ್ಕಾರಿ ಆದೇಶದ ಮೂಲಕ ಪರಿಷ್ಕರಿಸಿ, ನಂತರ ರಾಜಸ್ವ ಸ್ವೀಕೃತಿಗಳ ಅಂದಾಜುಗಳನ್ನು 2020–21ನೇ ಸಾಲಿನ ಆಯವ್ಯಯ ತಯಾರಿಸಲು ಕಳುಹಿಸತಕ್ಕದ್ದು.

(ಉ) ಅಂತೆಯೇ ಸಾಲಗಳು, ಬಂಡವಾಳ ಹೂಡಿಕೆ ಮತ್ತು ಮರುಪಾವತಿ ಅವಧಿಯ ಷರತ್ತು ಮತ್ತು ನಿಬಂಧನೆಗಳನ್ವಯ ವಿವಿಧ ಸಾರ್ವಜನಿಕ ಉದ್ದಿಮೆಗಳು, ಸಹಕಾರಿ ಸಂಘಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಂದ ಬಡ್ಡಿ ಸ್ವೀಕೃತಿಗಳು, ಲಾಭಾಂಶಗಳು, ಬಂಡವಾಳ ವಸೂಲು ಮಾಡಲು ಮತ್ತು ಇತರೇ ಇಲಾಖಾ ಸಾಲಗಳನ್ನು ವಸೂಲು ಮಾಡಲು ಪ್ರಯತ್ನಿಸತಕ್ಕದ್ದು. ಇದರ ಆಧಾರದ ಮೇಲೆ ಇಲಾಖೆಗಳು ಆಯವ್ಯಯದಲ್ಲಿ ಸೇರಿಸಲು ವಾಸ್ತವಿಕ ಮಾಹಿತಿಯನ್ನು ಕಳುಹಿಸಿಕೊಡತಕ್ಕದ್ದು. ಆಡಳಿತ ಇಲಾಖೆಗಳಲ್ಲಿ ಆಯವ್ಯಯ ಅಂದಾಜುಗಳಲ್ಲಿನ ಗುರಿ ಸಾಧನೆಗೆ ಕಟ್ಟುನಿಟ್ಟಿನ ಮೇಲ್ವಿಚಾರಣಾ ಕಾರ್ಯ ವಿಧಾನವನ್ನು ಅಳವಡಿಸಿಕೊಳ್ಳುವುದು.

(ಊ) 2019–20ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ರ ಪರಿಷ್ಕೃತ ಅಂದಾಜುಗಳ ನಡುವಿನ ಮತ್ತು 2019–20ರ ಪರಿಷ್ಕೃತ ಅಂದಾಜುಗಳ ಮತ್ತು 2020–21ನೇ ಸಾಲಿನ ಆಯವ್ಯಯ ಅಂದಾಜುಗಳ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ಲಗತ್ತಿಸಲಾದ ಅನುಬಂಧ–IIರ ಪ್ರಪತ್ರದಲ್ಲಿ ವಿವರವಾಗಿ ಒದಗಿಸಬೇಕು. ಮೇಲೆ ಉಲ್ಲೇಖಿಸಲಾದ ಅಂದಾಜುಗಳ ನಡುವಿನ ಪ್ರತಿ ಬಾಬ್ತುವಾರು ವ್ಯತ್ಯಾಸಗಳು ಮತ್ತು ಸಂದರ್ಭಾನುಸಾರ ಇಳಿತ ಮತ್ತು ಹೆಚ್ಚಳಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರಣಗಳನ್ನು ನೀಡುವುದು. ವ್ಯತ್ಯಾಸಕ್ಕೆ ತೋರಿಸುವ ಕಾರಣಗಳು ನಿರ್ದಿಷ್ಟವಾಗಿರಬೇಕು ಮತ್ತು ವಿವರವಾಗಿರಬೇಕು.

3) **ಬಾಕಿ ಸಂಗ್ರಹಣೆ:**

ವಾರ್ಷಿಕ ಯೋಜನೆಗಳಿಗೆ, ಹಿಂದಿನ ಯೋಜನಾ ಅವಧಿಯ ಬದ್ದತಾ ವೆಚ್ಚಗಳಿಗೆ, ಕಾಲಕಾಲಕ್ಕೆ ತುಟ್ಟಿಭತ್ಯೆಯ ಹೆಚ್ಚಳ, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಮತ್ತು ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಪರಿಹಾರ ಕಾಮಗಾರಿಗಳನ್ನೊಳಗೊಂಡಂತೆ ಸಮಾಜ ಕಲ್ಯಾಣ ಕಾರ್ಯಗಳು ಮುಂತಾದವುಗಳಿಗೆ ಹಣ ಒದಗಿಸಲು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗಿರುವುದರಿಂದ ಇಲಾಖಾ ಮುಖ್ಯಸ್ಥರುಗಳು ಬಾಕಿ ವಸೂಲಾತಿಗೆ ಕಟ್ಟುನಿಟ್ಟಿನ ಕಾರ್ಯಾಚರಣೆ ಕೈಗೊಳ್ಳುವಂತೆ ಕೋರಲಾಗಿದೆ.

4) **ಸಾಲ ವಸೂಲಾತಿಗಳು:**

ಈ ಹಿಂದೆ ಸಾಕಷ್ಟು ಸಾಲಗಳನ್ನು ಮಂಜೂರು ಮಾಡಲಾಗಿದ್ದು, ಅವುಗಳು ವಸೂಲಾಗದೆ ಇನ್ನೂ ಬಾಕಿ ಉಳಿದಿವೆ. ಮುಂದುವರಿದಂತೆ, ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಚಟುವಟಿಕೆಗಳಿಗಾಗಿ ಸರ್ಕಾರಿ ಕಂಪನಿಗಳು, ಕಾರ್ಪೋರೇಷನ್‌ಗಳು ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರಿ ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಇತ್ಯಾದಿಗಳಿಗೆ ನೀಡಲಾಗಿರುವ ಸಾಲಗಳ ವಿಶ್ಲೇಷಣೆಯು ಬಾಕಿ ಉಳಿದಿರುವ ಸಾಲದ ಪ್ರಮಾಣವು ಹೆಚ್ಚಾಗಿರುವುದನ್ನು ಮತ್ತು ಸಾಲಗಳ ವಸೂಲಾತಿಯು ಹೆಚ್ಚು ಅಥವಾ ಕಡಿಮೆ ಸ್ಥಿರವಾಗಿರುವುದನ್ನು ತೋರಿಸುತ್ತದೆ. ಸರ್ಕಾರವು ಹೂಡಿಕೆಗಾಗಿ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆಯಲ್ಲಿ ಸಾಲವನ್ನು ಪಡೆಯುತ್ತಿದ್ದು ಈ ಹೂಡಿಕೆಗಳ ಮೇಲಿನ ಮರುಪಾವತಿಯ ಶೇಕಡವಾರು ಪ್ರಮಾಣವು ತುಂಬಾ ಕಡಿಮೆಯಾಗಿರುತ್ತದೆ. ಬಾಕಿ ಇರುವ ಸಾಲಗಳು, ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳನ್ವಯ 2020–21ರಲ್ಲಿ ನಿರೀಕ್ಷಿಸಲಾದ ವಸೂಲಾತಿಯ ಆಧಾರದ ಮೇಲೆ ಸಾಲ ಸ್ವೀಕೃತಿಗಳ ಅಂದಾಜುಗಳನ್ನು ತಯಾರಿಸುವುದು. ಅನುಬಂಧ–IIIರಂತೆ ಸಾಲಗಳ ಬೇಡಿಕೆ, ವಸೂಲಿ ಮತ್ತು ಶಿಲ್ಕಿನ (DCB) ವಿವರಣೆಯೊಂದಿಗೆ ಅಂದಾಜುಗಳನ್ನು ಸಲ್ಲಿಸುವುದು.

5) **ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಉಲ್ಲೇಖಗಳು:**

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಉಪ ಲೆಕ್ಕ ಶೀರ್ಷಿಕೆ 800–ಇತರೆ ಸ್ವೀಕೃತಿಗಳ ಅಡಿಯಲ್ಲಿ ಸ್ವೀಕೃತಿಗಳನ್ನು ವರ್ಗೀಕರಿಸುತ್ತಿರುವ ಪರಿಣಾಮವಾಗಿ ಇಲಾಖೆಯ ಯಾವ ನಿರ್ದಿಷ್ಟ ಸ್ವೀಕೃತಿಗೆ ಸಂಬಂಧಿಸಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿಲ್ಲವೆಂದು ಉಲ್ಲೇಖಿಸಿದೆ. ಈ ಕಾರಣದಿಂದ ಸದರಿ ಪ್ರವೃತ್ತಿಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಎಲ್ಲಾ ಇಲಾಖೆಗಳು 2020–21ನೇ ಸಾಲಿನ ರಾಜಸ್ವ ಸ್ವೀಕೃತಿಯ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವಾಗ ಸ್ವೀಕೃತಿಗಳನ್ನು ಸೂಕ್ತ ಉಪ ಲೆಕ್ಕ ಶೀರ್ಷಿಕೆಯಡಿ ಯುಕ್ತವಾಗಿ ವರ್ಗೀಕರಿಸತಕ್ಕದ್ದು ಮತ್ತು ಈ ಬಗ್ಗೆ ಯಾವುದೇ ಅನುಮಾನವಿದ್ದಲ್ಲಿ ಅಥವಾ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವುದು.

ಎಲ್ಲಾ ಅಂದಾಜು ಅಧಿಕಾರಿಗಳು ಅಂದಾಜುಗಳನ್ನು ತಯಾರಿಸುವ ಬಗ್ಗೆ ತಮ್ಮ ವೈಯಕ್ತಿಕ ಗಮನಹರಿಸಿ, 2019-20ರ ಪರಿಷ್ಕೃತ ಅಂದಾಜುಗಳು ಮತ್ತು 2020-21ರ ಆಯವ್ಯಯ ಅಂದಾಜುಗಳೆರಡಕ್ಕೂ ವ್ಯತ್ಯಾಸಗಳನ್ನು ತೋರಿಸುವ ವಿವರಣಾ ಪಟ್ಟಿಯೊಂದಿಗೆ ಪೂರ್ಣಗೊಳಿಸಿದ ಮತ್ತು ಅಂತಿಮಗೊಳಿಸಿದ ಅಂದಾಜುಗಳನ್ನು ``ಮೊದಲ ಆದ್ಯತೆ"ಯ ಮೇಲೆ ಸಂಬಂಧಿಸಿದ ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರ / ಸರ್ಕಾರದ ಕಾರ್ಯದರ್ಶಿಗಳ ಮೂಲಕ ಆರ್ಥಿಕ ಇಲಾಖೆಗೆ ದಿನಾಂಕ:26–10–2019 ರೊಳಗಾಗಿ ಸಲ್ಲಿಸುವುದು.

ಈ ಅಧಿಕೃತ ಜ್ಞಾಪನ ಪತ್ರವನ್ನು ಆರ್ಥಿಕ ಇಲಾಖೆಯ ವೆಬ್‌ಸೈಟ್ **www.finance.karnataka.Gov.in** ನಿಂದ ಪಡೆಯಬಹುದು.

(ಏಕ್ ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ.

ಇವರಿಗೆ:–

(1) ಪ್ರಧಾನ ಮಹಾಲೇಖಪಾಲರು (ಎ & ಇ) / (ಜಿ & ಎಸ್‌ಎಸ್‌ಎ) / (ಇ & ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು
(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
(3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
(4) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
(5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
(6) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
(7) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
(8) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
(9) ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
(10) ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.

ಅನುಬಂಧ–1

(ಲಕ್ಷ ರೂ.ಗಳಲ್ಲಿ)

| **ಒಟ್ಟು ಬಾಕಿ ಉಳಿಕೆ** | ವರ್ಷಾವಾರು ವಿಂಗಡಣೆ | | ಮುಂದೂಡಲ್ಪಟ್ಟ / ವಿನಾಯಿತಿಗಳು | |
|---|---|---|---|---|
| | ವರ್ಷ | **ಬಾಕಿ** | ವರ್ಷ | **ಮೊತ್ತ** |
| | 2018-19 | | 2018-19 | |
| | 2017-18 | | 2017-18 | |
| | 2016-17 | | 2016-17 | |
| | 2015–16ರ ಅಂತ್ಯಕ್ಕೆ | | 2015–16ರ ಅಂತ್ಯಕ್ಕೆ | |

ಅನುಬಂಧ–II

ಆಯವ್ಯಯ

ಮುಖ್ಯ ಲೆಕ್ಕ ಶೀರ್ಷಿಕೆ ಅನುಸಾರ ರಾಜಸ್ವ ಮತ್ತು ಬಂಡವಾಳ

2019–20ನೇ ಸಾಲಿನ ಪರಿಷ್ಕೃತ ಅಂದಾಜುಗಳು ಮತ್ತು 2020–21ನೇ ಸಾಲಿನ

| ಲೆಕ್ಕ ಶೀರ್ಷಿಕೆ | 2019–20ರ ಆಯವ್ಯಯ ಅಂದಾಜುಗಳು | 2019–20ರ ಪರಿಷ್ಕೃತ ಅಂದಾಜುಗಳು | ಆಯವ್ಯಯ ಅಂದಾಜುಗಳು ಮತ್ತು ಪರಿಷ್ಕೃತ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ / ಇಳಿತ | ವ್ಯತ್ಯಾಸಗಳಿಗೆ ಕಾರಣಗಳು |
|---|---|---|---|---|
| | | | | |

ಅನುಬಂಧ–II

**ಜಮೆ ಅಂದಾಜುಗಳ ನಿರೂಪಣಾ ಪಟ್ಟಿ**

**ಆಯವ್ಯಯ ಅಂದಾಜುಗಳಲ್ಲಿ ವ್ಯತ್ಯಾಸಗಳನ್ನು ಸೂಚಿಸುವ ನಿರೂಪಣಾ ಪಟ್ಟಿ**

| 2020–21ರ ಆಯವ್ಯಯದ ಅಂದಾಜುಗಳು | 2019–20 ರ ಪರಿಷ್ಕೃತ ಅಂದಾಜುಗಳು ಮತ್ತು 2020–21 ರ ಆಯವ್ಯಯ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ/ಇಳಿತ | ವ್ಯತ್ಯಾಸಗಳಿಗೆ ಕಾರಣಗಳು | ಆರ್ಥಿಕ ಇಲಾಖೆಯಲ್ಲಿ ಭರ್ತಿ ಮಾಡಲಾಗುವುದು | | |
|---|---|---|---|---|---|
| | | | 2018–19ರ ವಾಸ್ತವಿಕಗಳು | 2019–20ರ 6 ತಿಂಗಳ ವಾಸ್ತವಿಕಗಳು | ಆರ್ಥಿಕ ಇಲಾಖೆಯ ಅಭಿಪ್ರಾಯ |
| | | | | | |

# ಅನುಬಂಧ- III

(ಲಕ್ಷ ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಸಾಲ ಮಂಜೂರಾತಿ ಸಂಖ್ಯೆ ಮತ್ತು ದಿನಾಂಕ | ಸಾಲದ ಮೊತ್ತ | 2020-21ಕ್ಕೆ ಬಾಕಿ | |
|---|---|---|---|---|
| | | | ಅಸಲು | ಬಡ್ಡಿ |
| 1 | 2 | 3 | 4 | 5 |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

| ಹಳೆಯ ಬಾಕಿ ಉಳಿಕೆ | | | ಹಳೆಯ ಬಾಕಿ ವಿಂಗಡಣೆ | | | | ಪಾವತಿಸದಿರುವುದಕ್ಕೆ ಕಾರಣಗಳು |
|---|---|---|---|---|---|---|---|
| ಅಸಲು | ಬಡ್ಡಿ | ದಂಡ ಬಡ್ಡಿ | ವರ್ಷ | ಅಸಲು | ಬಡ್ಡಿ | ದಂಡ ಬಡ್ಡಿ | ಷರತ್ತು & ನಿಬಂದನೆ ಮೇರೆಗೆ |
| (6) | (7) | (8) | (9) | (10) | (11) | (12) | (13) |
| | | | **2018-19** | | | | |
| | | | **2017-18** | | | | |
| | | | **2016-17** | | | | |
| | | | **2015-16** | | | | |
| | | | **2014-15** | | | | |
| | | | **2013-14ರ ಅಂತ್ಯಕ್ಕೆ** | | | | |